ಗದ್ಯಭಾಗಗಳನ್ನು ಆರಿಸಬೇಕು ಮತ್ತು ಯಾವ ಭಾಗಗಳನ್ನು ಬಿಡಬೇಕು ಎಂಬ ಪ್ರಶ್ನೆ; ಹಾಗೆಯೇ ಅನುವಾದ ಕ್ರಿಯೆಯಲ್ಲಿ ಉಚ್ಚಾರ ಚಿಹ್ನೆಗಳನ್ನು (diacritical marks) ಉಪಯೋಗಿಸಬೇಕೆ? ಪದ್ಯಗಳ ಅನುವಾದವೂ ಮೂಲದೊಡನೆ 'ದೃಶ್ಯ ಸಾದೃಶ್ಯ'ವನ್ನು (visual equivalence) ಹೊಂದಿರಬೇಕೆ? ಸಮಾನಾರ್ಥಕ ಪದಗಳಿಗೆಲ್ಲಾ (synonyms) ಒಂದೇ ಸಮಾನ ಪದವನ್ನು ಉಪಯೋಗಿಸಬೇಕೆ? ಇತ್ಯಾದಿ. ಈ ಪ್ರಶ್ನೆಗಳಿಗೆ ಪ್ರತಿಯೊಬ್ಬ ಅನುವಾದಕನೂ ತನ್ನದೇ ಆದ ಉತ್ತರಗಳನ್ನು ಕಂಡುಕೊಳ್ಳಬೇಕಾಗುತ್ತದೆ. (ಈ ಪ್ರಶ್ನೆಗಳು ಭಾರತೀಯ ಭಾಷೆಗಳ ಕೃತಿಗಳನ್ನು ಭಾರತೀಯೇತರ ಭಾಷೆಗಳಿಗೆ ಅನುವಾದಿಸುವ ಎಲ್ಲಾ ಅನುವಾದಕರಿಗೂ ಅನ್ವಯಿಸುತ್ತದೆ – ಅವರು ಕೊಟ್ಟುಕೊಳ್ಳುವ ಉತ್ತರಗಳು ಬೇರೆ ಬೇರೆಯಾಗಿರಬಹುದು.) ಈ ನೆಲೆಯಲ್ಲಿ, ಒಂದು ಪ್ರಶ್ನೆಗೆ– 'ಉಚ್ಚಾರ ಚಿಹ್ನೆ'ಗಳಿಗೆ ಸಂಬಂಧಿಸಿದ ಪ್ರಶ್ನೆಗೆ– ಉತ್ತರವನ್ನು ಪ್ರಕಾಶಕರೇ ಕೊಟ್ಟಿದ್ದರು: 'ಅನುವಾದದಲ್ಲಿ ಉಚ್ಚಾರ ಚಿಹ್ನೆಗಳಿಗೆ ಅವಕಾಶವಿಲ್ಲ.' ಉಳಿದ ಪ್ರಶ್ನೆಗಳಿಗೆ ನಾವುಗಳೇ ಉತ್ತರಗಳನ್ನು ಕೊಟ್ಟುಕೊಳ್ಳಬೇಕಿತ್ತು ಮತ್ತು ಆ ಉತ್ತರಗಳು ಈ ಯೋಜನೆಯ ಐವರಿಗೂ ಅನ್ವಯವಾಗಬೇಕಿತ್ತು.

- ಅ) ಆಯ್ಕೆ–ಪಠ್ಯದ ನೆಲೆಯಲ್ಲಿ: ಅನುವಾದಿಸುವ ಪದ್ಯಗಳ ಆಯ್ಕೆಯನ್ನು ಆಯಾಯ ಅನುವಾದಕನಿಗೇ ಬಿಡಬೇಕು ಎಂದು ನಾವು ನಿರ್ಧರಿಸಿಕೊಂಡಿದ್ದೆವು. ನಾನು ಈ ನೆಲೆಯ ಆಯ್ಕೆಯಲ್ಲಿ ಎರಡು ಅಂಶಗಳನ್ನು ಗಮನಿಸಿದ್ದೆ: ಕಥೆಯ ಗತಿ ಎಲ್ಲಿಯೂ ಭಂಗವಾಗಬಾರದು ಮತ್ತು ಕಾವ್ಯಾತ್ಮಕವಾಗಿ ಮುಖ್ಯವಾಗುವ ಪದ್ಯಗಳನ್ನೂ ಆರಿಸಬೇಕು (ಅವುಗಳು ಕಥೆಯನ್ನು ಮುಂದುವರಿಸದಿದ್ದರೂ ಕೂಡ). ಹಾಗೆಯೇ, ಸುಮಾರು 400 ಷಟ್ಪದಿಗಳನ್ನು ಆದಿಪರ್ವದಿಂದಲೂ ಮತ್ತು 150 ಷಟ್ಪದಿಗಳನ್ನು ಭೀಷ್ಮ ಪರ್ವದಿಂದಲೂ ಆರಿಸಿದೆ. (ಮುಖ್ಯ ಸಂಪಾದಕರಾಗಿರುವ ಶ್ರೀಧರ್ ನನ್ನ ಅನುವಾದವನ್ನು ಪರಿಶೀಲಿಸುವಾಗ ಕಥೆಯ ಗತಿಗಾಗಿ ಮತ್ತೆ ಕೆಲವು ಷಟ್ಪದಿಗಳನ್ನು ಆರಿಸಿದರು ಮತ್ತು ಒಂದೆರಡು ಪದ್ಯಗಳನ್ನು ಕೈಬಿಟ್ಟರು.)

ಆದರೆ, ಹೆಚ್ಚಿನ ಸಂದರ್ಭಗಳಲ್ಲಿ ಈ ಬಗೆಯ ಆಯ್ಕೆ ಇಷ್ಟು ಸುಲಭವಾಗಿರುವುದಿಲ್ಲ. ಉದಾಹರಣೆಗೆ: 'ಸಭಾಪರ್ವ'ದ ಮೊದಲ ಸಂಧಿಯಲ್ಲಿಯೇ ಧರ್ಮರಾಜನಿಗೆ ನಾರದ ಮಹರ್ಷಿಯ ಉಪದೇಶವಿದೆ. ಇದು 67 ಷಟ್ಪದಿಗಳಷ್ಟು ದೀರ್ಘವಾಗಿದೆ ಮತ್ತು ಆ ಉಪದೇಶದಲ್ಲಿ ಇಂದು ನಾವು ಒಪ್ಪಲು ಸಾಧ್ಯವಿಲ್ಲದ ಅನೇಕ ವಿಚಾರಗಳಿವೆ. ರಾಜನ ಕರ್ತವ್ಯವನ್ನು ವಿವರಿಸುತ್ತಾ, 'ವರ್ಣಸಂಕರ' ಹಾಗೂ 'ಜಾತಿಸಂಕರ'ವಾಗದಂತೆ ನೋಡಿಕೊಳ್ಳುವುದು ರಾಜನ ಕರ್ತವ್ಯ ಎಂದು ನಾರದ ಹೇಳುತ್ತಾನೆ: 'ಜಾತಿಸಂಕರವಿಲ್ಲಲೇ ಜನ/ಜಾತದಲಿ ಹೀನೋತ್ತಮರು ನಿ/ರ್ಣೀತರೇ ನಿಜ ಮಾರ್ಗದಲಿ ಕುಲವಿಹಿತ ಧರ್ಮದಲಿ...'. ಈ ಬಗೆಯ ವರ್ಣಸಂಕರ ಭೀತಿಯನ್ನು ಇತರ ಪ್ರಸಿದ್ಧ ಪ್ರಾಚೀನ–ಮಧ್ಯಕಾಲೀನ ಕಾವ್ಯಗಳೂ ದಾಖಲಿಸುತ್ತವೆ; ಮತ್ತು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯನ್ನು ವೈಭವೀಕರಿಸುತ್ತವೆ. ಹಾಗೆಯೇ, ಸರಿ ಸುಮಾರು ಎಲ್ಲಾ ಆಧುನಿಕ ಪೂರ್ವ ಕಾವ್ಯಗಳು ಪುರುಷಕೇಂದ್ರಿತ ವ್ಯವಸ್ಥೆಯನ್ನು ಮಾದರಿಯಾಗಿ ಪರಿಗಣಿಸುತ್ತವೆ. ಇಂತಹ ಪದ್ಯಗಳನ್ನು/ ಪದ್ಯ–ಗದ್ಯ ಭಾಗಗಳನ್ನು ಬಿಡಬೇಕೆ? ಅಥವಾ, ಅಂದಿನ ಕಾಲದ ವೈಚಾರಿಕತೆಯನ್ನು ಅದು ಇದ್ದ ಹಾಗೆಯೇ ದಾಖಲಿಸಬೇಕೆ? ಈ ಪ್ರಶ್ನೆಗೆ ಸರ್ವಸಮ್ಮತ ಉತ್ತರ ಅಸಾಧ್ಯವೆಂದೇ ನನಗೆ ತೋರುತ್ತದೆ.

- ಆ) ಆಯ್ಕೆ: ಅನುವಾದಕ್ರಿಯೆಯ ನೆಲೆಯಲ್ಲಿ

**1. ಮೊದಲಿಗೆ, ದೃಶ್ಯಸಾದೃಶ್ಯದ ಬಗ್ಗೆ:**

ಈ ಪರಿಕಲ್ಪನೆಯನ್ನು ಮೊದಲು ಮಂಡಿಸಿದವನು ಯುಜೀನ್ ನೀಡಾ ಎಂಬ 20ನೆಯ ಶತಮಾನದ ಭಾಷಾಶಾಸ್ತ್ರಜ್ಞ. ಮೂಲ ಮತ್ತು ಅನುವಾದ ಇವೆರಡರ ನಡುವೆ ಅರ್ಥ–ಸಾದೃಶ್ಯದ (semantic equivalence) ಜೊತೆಗೆ ಆಕೃತಿ ಸಾದೃಶ್ಯವೂ